ಇಂದು ದಿ: 29.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿಯ ಪರ: ಶ್ರೀ ಎಸ್ ಎಂ. ವಕೀಲರಿಂದ .

ನಮ್ಮ ಕುಟುಂಬಕ್ಕೆ ಹೆಬ್ಬಳ್ಳಿ ಗ್ರಾಮದ ಸರ್ವೆ ನಂ. 127/1 ರಲ್ಲಿ 5 ಎಕರೆ 29 ಗುಂಟೆ, ಸರ್ವೆ ನಂ. 11 ರಲ್ಲಿ 30 ಗುಂಟೆ, ಬೀಸನಹಳ್ಳಿ ಗ್ರಾಮದ ಸರ್ವೆ ನಂ. 14 ರಲ್ಲಿ 2 ಎಕರೆ 27 ಗುಂಟೆ, ಇನ್ನೊಂದು ಸರ್ವೆನಂಬರಿನಲ್ಲಿ 2 ಎಕರೆ 27 ಗುಂಟೆ ಇರುತ್ತದೆ. ಸರ್ವೆ ನಂ. 14/3 ರಲ್ಲಿ 2 ಎಕರೆ 27 ಗುಂಟೆ ಇರುತ್ತದೆ ಎನ್ನುವುದು ನಿಜ. ಸದರಿ 4 ಜಮೀನುಗಳನ್ನು ಹೊರತುಪಡಿಸಿ ಬೇರೆ ಜಮೀನುಗಳು ಇರುವುದಿಲ್ಲ. ಗುಂಡೇರಿ ಗ್ರಾಮದ 4 ಎಕರೆ ಅಡಿಕೆ ತೋಟ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟದ್ದಲ್ಲ. ಸದರಿ ಜಮೀನು ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿಯಲ್ಲ. ದಾವಣಗೆರೆ ನಗರದಲ್ಲಿ ಆರ್ ಸಿ ಸಿ ಮನೆ ನಮ್ಮ ಕುಟುಂಬಕ್ಕೆ ಇರುತ್ತದೆ ಎಂದರೆ ಸರಿಯಲ್ಲ. 1979 ರಲ್ಲಿ ಆದ ಪಾಲು ವಿಭಾಗದಲ್ಲಿ ಮೇಲೆ ಹೇಳಿದ 4 ಸ್ವತ್ತುಗಳು ಇರುತ್ತವೆ. ಸದರಿ ಪಾಲು ವಿಭಾಗದಲ್ಲಿ ಬೀಸನಹಳ್ಳಿ ಗ್ರಾಮದ ಸರ್ವೆ ನಂ. 14 ರಲ್ಲಿ ನನಗೆ 2 ಎಕರೆ 27 ಗುಂಟೆ ಹಾಗೂ ನಮ್ಮ ಅಣ್ಣನಿಗೆ ಸರ್ವೆ ನಂ. 14/3 ರಲ್ಲಿ 2 ಎಕರೆ 27 ಗುಂಟೆ, ಹೆಬ್ಬಳ್ಳಿ ಗ್ರಾಮದ ಸರ್ವೆ ನಂ. 11 ರಲ್ಲಿ 30 ಗುಂಟೆ ಇದ್ದು, ಅದರಲ್ಲಿ ನನಗೆ 15 ಗುಂಟೆ ನಮ್ಮ ಅಣ್ಣನಿಗೆ 15 ಗುಂಟೆ ಬಂದಿರುತ್ತದೆ. ಸರ್ವೆ ನಂ. 127/1 ರ ಜಮೀನಿನ ಮೇಲೆ ನ್ಯಾಯಾಲಯದಲ್ಲಿ ಕೇಸು ಚಾಲ್ತಿಯಲ್ಲಿದ್ದ ಕಾರಣ, ಸದರಿ ಜಮೀನನ್ನು ಭಾಗ ಮಾಡಿಕೊಂಡಿಲ್ಲ. ಹೊಸದುರ್ಗ ತಾಲ್ಲೂಕು ನಾಗರಕಟ್ಟೆಯಲ್ಲಿ 2 ಎಕರೆ ಜಮೀನು ಇದ್ದು, ಅದನ್ನು ನಾನು ಮಾರಾಟ ಮಾಡಿರುತ್ತೆನೆ ಎಂದರೆ ಸರಿಯಲ್ಲ. ನಮ್ಮ ಅಣ್ಣ ವೀರಭದ್ರಪ್ಪ ನಮ್ಮ ತಂದೆಯನ್ನು ಕೊಲೆ ಮಾಡಿ 1966 ರಲ್ಲಿ ಜೈಲಿಗೆ ಹೋಗಿ 1976 ರಲ್ಲಿ ಕೇಸಿನಿಂದ ಬಿಡುಗಡೆಯಾಗಿರುತ್ತಾನೆ ಎನ್ನುವುದು ನಿಜ. ನಮ್ಮ ಅಣ್ಣ ನಮ್ಮ ತಂದೆಯನ್ನು ಕೊಲೆ ಮಾಡಲು ನಾನು ಪ್ರಚೋದನೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಜಮೀನುಗಳನ್ನು ಲಪಟಾಯಿಸುವ ಸಲುವಾಗಿ ನಮ್ಮ ಅಣ್ಣನನ್ನು ಜೈಲಿಗೆ ಕಳುಹಿಸುವ ಸಲುವಾಗಿ ನಾನು ಕೊಲೆ ಮಾಡಲು ನಮ್ಮ ಅಣ್ಣನಿಗೆ ಪ್ರಚೋದನೆ ಮಾಡಿದ್ದೆ ಎಂದರೆ ಸರಿಯಲ್ಲ. 1979 ರಲ್ಲಿ ಆದ ಪಾಲು ವಿಭಾಗದಂತೆ ಖಾತೆ ವರ್ಗಾವಣೆ ಆಗಿರುತ್ತದೆ. ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿಲ್ಲ. ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾಗರಕಟ್ಟೆ ಮತ್ತು ಬೀಸನಹಳ್ಳಿ ಗ್ರಾಮದ ಒಟ್ಟು 4 ಜಮೀನುಗಳನ್ನು ನಾನು ಬೇರೆಯವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಖಾತೆಯನ್ನು ಎಂ ಆರ್ ನಂ. 2/1994-95 ರಂತೆ ಒಪ್ಪಿಗೆಯ ಮೇರೆಗೆ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇನೆ ಎನ್ನುವುದು ನಿಜ. ಆ ಸಮಯದಲ್ಲಿ ಈ ಕೇಸು ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿತ್ತು ಎಂದರೆ ಸರಿಯಲ್ಲ. ಈ ಕೇಸು 1996 ರಲ್ಲಿ ಸಲ್ಲಿಸಿರುತ್ತೇನೆ. ಒಪ್ಪಿಗೆಯ ಮೇರೆಗೆ ನಾನು ಖಾತೆಯನ್ನು ಮಾಡಿಸಿಕೊಂಡಿರುತ್ತೇನೆ ಎಂದು ವಾದಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ಅಣ್ಣ ತನ್ನ ಲಿಖಿತ ಹೇಳಿಕೆಯಲ್ಲಿ ನನ್ನ ಮತ್ತು ವಾದಿಯ ನಡುವೆ ಯಾವುದೇ ಪಾಲು ವಿಭಾಗ ಪತ್ರ ಆಗಿಲ್ಲ ನನ್ನಭಾಗದ ಸ್ವತ್ತನ್ನು ನಾನು ವಾದಿಗೆ ಮಾರಾಟ ಮಾಡಿಲ್ಲ ಎಂದು ಹೇಳಿರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. ನಮ್ಮ ಅಣ್ಣನ ಭಾಗಕ್ಕೆ ಬಂದ ಸ್ವತ್ತಿಗೆ 50 ಸಾವಿರ ಎಂದು ವಾದ ಪತ್ರದಲ್ಲಿ ಬರೆಸಿಲ್ಲ. ಈ ದಾವೆಯನ್ನು ಸಲ್ಲಿಸುವ ಮೊದಲು ದಾವಾ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ದಿಃ 14.04.1993 ರಲ್ಲಿ ನಮ್ಮ ಅಣ್ಣ ಮತ್ತು ನನ್ನ ಮಧ್ಯೆ ದಾವಾ ಆಸ್ತಿ ಮಾರಾಟದ ಒಪ್ಪಂದದ ಕರಾರು ಆಗಿರುತ್ತದೆ. ಸದರಿ ಪಾಲು ವಿಭಾಗದ ಪತ್ರದಲ್ಲಿ ಇಂತಹ ದಿಕ್ಕಿನ ಸ್ವತ್ತು ನನ್ನದು ಎಂದು ಹಾಗೂ ಇಂತಹ ಸ್ವತ್ತಿನ ದಿಕ್ಕು ಪ್ರತಿವಾದಿಯದ್ದು ಎಂದು ಬರೆಸಿಲ್ಲ. 1994 ರಲ್ಲಿ ನನ್ನ ಹೆಸರಿಗೆ ದಾವಾ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ. ನಾನು ಖಾತೆ ಮಾಡಿಸಿಕೊಳ್ಳುವ ಮೊದಲು ದಾವಾ ಸ್ವತ್ತಿಗೆ ನಾನು ಮಾಲಕ ಎಂದು ನ್ಯಾಯಾಲಯ ಘೋಷಣೆ ಮಾಡಿರಲಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಸಲ್ಲಿಸಿರಲಿಲ್ಲ ಎಂದು ಹೇಳುತ್ತಾರೆ. ಮೂಲ ದಾವೆ ನಂ. 86/1996 ರಲ್ಲಿ ನನ್ನನ್ನು ದಾವಾ ಆಸ್ತಿಗೆ ಮಾಲಕನೆಂದು ನ್ಯಾಯಾಲಯ ಘೋಷಣೆ ಮಾಡಿರಲಿಲ್ಲ ಎನ್ನುವುದು ನಿಜ. ಸದರಿ ದಾವೆಯಲ್ಲಿ ದಾವಾ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಳ್ಳಲು ಆದೇಶ ಆಗಿರಲಿಲ್ಲ ಎನ್ನುವುದು ನಿಜ. ನಮ್ಮ ಅಣ್ಣನಿಗೆ ಪಾಲು ವಿಭಾಗದ ಬಾಬ್ತು ಹಣ ಕೊಟ್ಟಿದ್ದರೆ ನ್ಯಾಯಾಲಯದಲ್ಲಿ ರಾಜಿ ಮಾಡಿಕೊಳ್ಳಬೇಕಾಗಿತ್ತು ಎಂದರೆ ಸಾಕ್ಷಿ ನಮ್ಮ ಅಣ್ಣ ನ್ಯಾಯಾಲಯಕ್ಕೆ ಬರಲಿಲ್ಲ ಎಂದು ಹೇಳುತ್ತಾರೆ. 2007 ರಲ್ಲಿ ಸಲ್ಲಿಸಿದ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಖಾತೆ ಮಾಡಿಸಿಕೊಂಡಿದ್ದೆ ಎಂದು ನಾನು ಹೇಳಿಲ್ಲ ಎನ್ನುವುದು ನಿಜ. 1993 ರಲ್ಲಿ ಸದರಿ ಪಾಲು ವಿಭಾಗ ಪತ್ರವನ್ನು ನಮ್ಮ ಅಣ್ಣ ಹೊಳಲ್ಕೆರೆಯಲ್ಲಿ ಬರೆಸಿಕೊಟ್ಟಿರುತ್ತಾನೆ. ಆಗ ನಮ್ಮ ಅಣ್ಣನ ಹೆಂಡತಿ ಮಕ್ಕಳು ಜೀವಂತ ಇದ್ದರು ಎನ್ನುವುದು ನಿಜ. ದಾವಾ ಆಸ್ತಿ ನಮ್ಮ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿ ಎನ್ನುವುದು ನಿಜ. ಸದರಿ ಪಾಲು ವಿಭಾಗ ಪತ್ರವನ್ನು ನಮ್ಮ ಅಣ್ಣ ಹೊಳಲ್ಕೆರೆಗೆ ಬಂದು ಬರೆಸಿಲ್ಲ ಎಂದರೆಸರಿಯಲ್ಲ. ಸದರಿ ಪತ್ರವನ್ನು ನಮ್ಮ ಅಣ್ಣ ತೆಗೆದುಕೊಂಡು ಬಂದು ಮಾಹಿತಿ ಕೊಟ್ಟು ಬರೆಸಿಕೊಟ್ಟಿರುತ್ತಾನೆ.

ಸದರಿ ಪತ್ರವನ್ನು ಬರೆಯಲು ಸಾಕ್ಷಿದಾರರನ್ನು ಹಾಗೂ ಪತ್ರ ಬರಹಗಾರರನ್ನು ನಮ್ಮ ಅಣ್ಣನೇ ಸೇರಿಸಿದ್ದ. ಸದರಿ ವಿಚಾರವಾಗಿ ನನ್ನ ಮತ್ತು ನಮ್ಮ ಅಣ್ಣನ ಮಕ್ಕಳ ಮಧ್ಯೆ ಗಲಾಟೆ ನಡೆಯಿತು ಎನ್ನುವುದು ನಿಜ. ಸದರಿ ವಿಚಾರವಾಗಿ ಅವರನ್ನು ಹೇಗಾದರು ಮಾಡಿ ಜೈಲಿಗೆ ಕಳುಹಿಸಬೇಕು ಎಂಬ ಉದ್ದೇಶದಿಂದ ನಾನು ಅವರ ವಿರುದ್ಧ 307 ರ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದೆ ಎಂದರೆ ಸರಿಯಲ್ಲ. ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ನಮ್ಮ ಅಣ್ಣ ಮತ್ತು ಅವರ ಕುಟುಂಬವನ್ನು ಜೈಲಿಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಮತ್ತು ವಾದ ಪತ್ರದಲ್ಲಿ ಪೂರ್ವಕ್ಕೆ ಚೆಕ್ಕುಬಂದಿ ಚಂದಪ್ಪ ಬದಲಾಗಿ ಚಂದ್ರಪ್ಪ ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿ ತಪ್ಪಾಗಿ ಇರುತ್ತದೆ ಎಂದು ಹೇಳುತ್ತಾರೆ. ನಾನು ದಾವಾ ಆಸ್ತಿಯ ಸ್ವಾಧೀನತೆಯಲ್ಲಿ ಇದ್ದರೆ ಸರಿಯಾದ ಚೆಕ್ಕುಬಂದಿಯನ್ನು ಬರೆಸುತ್ತಿದ್ದೆ ಈ ರೀತಿ ತಪ್ಪಾಗಿ ಬರೆಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 127/1 ರ ಜಮೀನು ಉತ್ತರ ದಿಕ್ಕಿಗೆ, ಸರ್ವೆ ನಂ. 127/7 ದಕ್ಷಿಣ ದಿಕ್ಕಿಗೆ ಇರುತ್ತದೆ. ಸರ್ವೆ ನಂ. 127/7 ರಲ್ಲಿ 3 ಗುಂಟೆ ಚಾನಲ್ ಗೆ ಹೋಗಿರುತ್ತದೆ. ಸದರಿ ಜಮೀನಿನ ದಕ್ಷಿಣಕ್ಕೆ ಚಾನಲ್ ಹೋಗಿರುವ ಜಮೀನು ಇರುತ್ತದೆ. ದಿಃ 16.04.1993 ರ ಜುಬಾನಿ ಪಾಲು ವಿಭಾಗ ಪತ್ರ ಮತ್ತು ದಿಃ 08.12.1993 ರ ಪ್ರಮಾಣ ಪತ್ರದಲ್ಲಿರುವ ನಮ್ಮ ಅಣ್ಣನ ಸಹಿಗಳು ಎರಡು ವ್ಯತ್ಯಾಸ ಇರುತ್ತವೆ ಎನ್ನುವುದು ನಿಜ. ಸದರಿ ಜುಬಾನಿ ಪಾಲು ವಿಭಾಗ ಪತ್ರ, ಪ್ರಮಾಣ ಪತ್ರ ಹಾಗೂ ನಮ್ಮ ಅಣ್ಣ ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿನ ನಮ್ಮ ಅಣ್ಣನ ಸಹಿಗಳು ವ್ಯತ್ಯಾಸ ಇರುತ್ತವೆ ಎನ್ನುವುದು ನಿಜ. ನಿಪಿಃ 8 ರ ಪ್ರಮಾಣ ಪತ್ರದ ಸ್ಟಾಂಪ್ ಪೇಪರನ್ನು ಹೊಸದುರ್ಗದಲ್ಲಿ ನಮ್ಮ ಅಣ್ಣ ತೆಗೆದುಕೊಂಡಿರುತ್ತಾನೆ. ಮೂಲ ದಾವೆ ನಂ. 86/1996 ರಲ್ಲಿ ನ್ಯಾಯಾಲಯ ಜುಬಾನಿ ಪಾಲು ವಿಭಾಗ ಪತ್ರ ಮತ್ತು ಪ್ರಮಾಣ ಪತ್ರದ ಮೇಲೆ ನನ್ನನ್ನು ದಾವಾ ಆಸ್ತಿಗೆ ಮಾಲಕನೆಂದು ಘೋಷಿಸಲು ಬರುವುದಿಲ್ಲವೆಂದು ಹೇಳಿ ವಜಾಗೊಳಿಸಿರುತ್ತದೆ ಎನ್ನುವುದು ನಿಜ.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಯ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

(ವೈ.ಕೆ ಬೇನಾಳ್ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.